ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಛೇರಿ

ಕರ್ನಾಟಕ ಸರ್ಕಾರ

ನಂ.86, ಶುಭೋದಯ ಕಾಂಪ್ಲೆಕ್ಸ್,
ರೈಲ್ವೆ ಸಮಾನಾಂತರ ರಸ್ತೆ,
ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು -560 020

ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ಸಾಲಮನ್ನಾ/ನೇ.ವಿ.ಪ್ಯಾ/2017-18 ದಿನಾಂಕ: 26.02.2018

## ಸುತ್ತೋಲೆ-3

ವಿಷಯ:- ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ಸಹಕಾರ ಬ್ಯಾಂಕ್‌ಗಳು ಮತ್ತು ಪತ್ತಿನ ಸಹಕಾರಿ ಸಂಘಗಳ ಮೂಲಕ ನೀಡಿದ ಸಾಲ ಸೌಲಭ್ಯ ಗಳನ್ನು ರೂ.50,000/- ದವರಗೆ ಮನ್ನಾ ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಲ್ಲಿಸುವ ಕುರಿತು.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ ವಾಕೈ 57 ಜಕೈಯೋ . 2017 ಬೆಂಗಳೂರು, ದಿನಾಂಕ:13.12.2017, 29.01.2018 ಮತ್ತು 20.02.2018.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸರ್ಕಾರಿ ಆದೇಶ ದಿನಾಂಕ 13-12-2017 ರಲ್ಲಿ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳಿಂದ ದಿನಾಂಕ: 30.06.2017 ರ ಅಂತ್ಯಕ್ಕೆ ಹೊಂದಿರುವ ಹೊರ ಬಾಕಿಯಲ್ಲಿ ರೂ.50,000/- ಗಳ ವರೆಗಿನ ಸಾಲ (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಮಾಡಲು ಮಂಜೂರಾತಿ ನೀಡಿರುವುದು ಸರಿಯಷ್ಟೆ.

ಮುಂದುವರೆದು ದಿನಾಂಕ 20-02-2018 ರ ಸರ್ಕಾರಿ ಆದೇಶದಲ್ಲಿ ಸಾಲ ಮನ್ನಾದ ಅವಕಾಶವನ್ನು ವಿವಿದೊದ್ದೇಶ ಸಹಕಾರಿ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕುಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ/ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ವಿಸ್ತರಿಸಲಾಗಿದೆ.

**ಈ ಹಿನ್ನೆಲೆಯಲ್ಲಿ ಎಲ್ಲಾ ಅರ್ಹ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳಿಗೆ ತಮ್ಮ ತಮ್ಮ ಪ್ರಸ್ತಾವನೆಗಳನ್ನು ಇಲಾಖೆಯ ವೆಬ್ ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಲು ದಿನಾಂಕ 05-03-2018 ರವರೆಗೆ ಅಂತಿಮ ಅವಕಾಶ ನೀಡಲಾಗಿದೆ. ಆದ್ದರಿಂದ ನಿಮ್ಮ ವ್ಯಾಪ್ತಿಯ ಎಲ್ಲಾ ಅರ್ಹ ಸಂಘ/ಬ್ಯಾಂಕುಗಳಿಗೆ ಈ ಮಾಹಿತಿ ನೀಡುವುದು ಮತ್ತು ಅಪ್ ಲೋಡ್ ಮಾಡಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ದ್ವಿ ಪ್ರತಿಗಳಲ್ಲಿ ಪ್ರಸ್ತಾವನೆಯನ್ನು ಎಲ್ಲಾ ಪ್ರಮಾಣ ಪತ್ರಗಳೊಂದಿಗೆ ಸಹಿ ಮಾಡಿ ಶೀಘ್ರವಾಗಿ ಕೇಂದ್ರ ಕಛೇರಿಗೆ ಶಿಫಾಸರಸ್ಸು ಮಾಡತಕ್ಕದ್ದು.**

ದಿನಾಂಕ 19-02-2018 ಮತ್ತು 20-02-2018 ರಂದು ಬಾಗಲಕೋಟೆ ಮತ್ತು ಬೆಳಗಾವಿಯಲ್ಲಿ ನಡೆದ ಸಾಲಮನ್ನಾ ಕಾರ್ಯಾಗಾರದಲ್ಲಿ ಕೇಳಿದ್ದ ಕೆಲವು ವಿಷಯಗಳ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ. ಸಾಲಮನ್ನಾ ವೆಬ್ ಪೋರ್ಟಲ್‌ನಲ್ಲಿ ಕ್ಲೈಮ್ ಬಿಲ್ಲುಗಳನ್ನು ಸಲ್ಲಿಸುವ ಮಾರ್ಗಸೂಚಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

| ಕ್ರ.ಸಂ | ಕೋರಿರುವ ಸ್ಪಷ್ಟೀಕರಣ | ನೀಡಲಾದ ಸ್ಪಷ್ಟೀಕರಣ |
|---|---|---|
| 1 | ನೇಕಾರರಿಗೆ ನೀಡಿದ ಕ್ಯಾಷ್ ಕ್ರೆಡಿಟ್ ಸಾಲ ಮತ್ತು ದುಡಿಮೆ ಬಂಡವಾಳದ ಬಗ್ಗೆ ವಿವರಣೆ | ನೇಕಾರರಿಗೆ ನೇಕಾರಿಕೆ ವೃತ್ತಿ ನಡೆಸಲು ನೀಡಲಾದ ಸಾಲವನ್ನು ಈ ರೀತಿ ಪರಿಗಣಿಸಬೇಕು. ನೇಕಾರರಿಗೆ ನೇಕಾರಿಕೆ ಉದ್ದೇಶಕ್ಕಾಗಿ ನೀಡಲಾದ ಮಂಜೂರು ಮಾಡಲಾದ ಸಾಲವನ್ನು ಗಣನೆಗೆ ತೆಗೆದುಕೊಳ್ಳುವುದು. ನೇಕಾರರಿಗೆ ಸಾಲದ ಮಿತಿಯನ್ನು ನಿಗದಿ ಮಾಡಿ ಆ ಸಾಲದ ಮಿತಿಯೊಳಗೆ ಹಲವಾರು ಬಾರಿ ವ್ಯವಹಾರ ಮಾಡಿದಂತಹ ಪ್ರಕರಣಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ. ಸರ್ಕಾರಿ ಆದೇಶದ ಪ್ರಕಾರ ಈ ರೀತಿಯ ಕ್ಯಾಶ್ ಕ್ರೆಡಿಟ್ (ಲಿಮಿಟ್) ಸಾಲಗಳಿಗೆ ಸಾಲ ಮನ್ನಾ ಅವಕಾಶವಿರುವುದಿಲ್ಲ.<br>ಆದರೆ ಅಲ್ಪಾವಧಿ ಹಾಗೂ ಮಧ್ಯಮಾವಧಿ (ಐದು ವರ್ಷಗಳವರೆಗಿನ ಅವಧಿ) ಸಾಲವನ್ನು ಮಂಜೂರು ಮಾಡಿ ಪೂರ್ತಿ ಸಾಲವನ್ನು ದುಡಿಮೆ ಬಂಡವಾಳ ಹಾಗೂ ಇತರೆ ನೇಕಾರಿಕೆ ಉದ್ದೇಶಕ್ಕೆ ಬಳಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಸೂಕ್ತವಾಗಿ ಪರಿಶೀಲಿಸಿ ಪರಿಗಣಿಸಬಹುದು.<br>ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ತದನಂತರ ಬಿಲ್ಲುಗಳನ್ನು ಶಿಫಾರಸ್ಸು ಮಾಡತಕ್ಕದ್ದು. |

.... 2

| | | |
|---|---|---|
| 2 | ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017 ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. | ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳು ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017 ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. |
| 3 | ಮಾಹಿತಿಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ | ಅರ್ಹ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳಿಗೆ ತಮ್ಮ ತಮ್ಮ ಪ್ರಸ್ತಾವನೆಗಳನ್ನು ಇಲಾಖೆಯ ವೆಬ್ ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಲು **ದಿನಾಂಕ: 05.03.2018 ರವರೆಗೆ** ಅಂತಿಮ ಅವಕಾಶ ನೀಡಲಾಗಿದೆ. |
| 4 | ಈ ಯೋಜನೆಯಲ್ಲಿ ಅರ್ಹವಿರುವ ರೂ.50,000/- ಗಳ ಅಸಲು ಮತ್ತು ಸಂಬಂಧಿಸಿದ ಬಡ್ಡಿಯೊಂದಿಗೆ ಜಾರಿಯಲ್ಲಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಕ್ಲೈಮ್ ಬಿಲ್ಲುಗಳನ್ನು ಸಾಲ ಮರುಪಾವತಿಸಲು ನಿಗದಿಪಡಿಸಿದ ತಿಂಗಳಿನ 30 ದಿನದೊಳಗಾಗಿ ಕ್ಲೈಮ್ ಬಿಲ್ಲುಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸತಕ್ಕದ್ದು. | ಅರ್ಹ ನೇಕಾರರಿಗೆ ನೀಡಿದ ಸಾಲಗಳ ಮೇಲೆ ಈಗಾಗಲೇ ಬಡ್ಡಿ ಸಹಾಯಧನ ಯೋಜನೆಯ ಅಡಿಯಲ್ಲಿ ಸಹಾಯಧನ ಪಡೆದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಈಗಾಗಲೇ ಪಡೆದಿರುವ ಬಡ್ಡಿ ಸಹಾಯಧನದ ಮೊತ್ತವನ್ನು ಕಡಿತಗೊಳಿಸಿ ಅರ್ಹ ಬಾಕಿ ಮೊತ್ತವನ್ನು ಮಾತ್ರ ಕ್ಲೈಮ್ ಮಾಡತಕ್ಕದ್ದು.<br>ಅದರಂತೆ ಸಂಘ/ಸಹಕಾರಿಗಳಿಂದ ಅಪ್‌ಲೋಡ್ ಮಾಡಿದ ನೇಕಾರರವಾರು ಮಾಹಿತಿಯನ್ನು ಸಂಘ/ಸಹಕಾರಿಗಳ ಲಾಗಿನ್‌ನಲ್ಲಿ ಪರಿಷ್ಕರಿಸಿ ತದನಂತರ ಕ್ಲೈಮ್ ಬಿಲ್ಲುಗಳನ್ನು ಇಲಾಖಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಸೂಕ್ತವಾಗಿ ಶಿಫಾರಸ್ಸು ಮಾಡತಕ್ಕದ್ದು.<br>ಮುಂದುವರೆದು, ಅಸಲು ಮತ್ತು ಬಡ್ಡಿ ಸೇರಿ ರೂ:50000-00ಗಳಿಗಿಂತ ಕಡಿಮೆ ಇರುವ ಪ್ರಕರಣಗಳಲ್ಲಿ ಕ್ಲೈಮ್ ಬಿಲ್ಲುಗಳನ್ನು ಸಾಲ ಮರುಪಾವತಿಸಲು ನಿಗದಿ ಪಡಿಸಿದ ತಿಂಗಳಿಗೆ ಕಾಯದೇ ಕೂಡಲೇ ಕ್ಲೈಮ್ ಬಿಲ್ಲುಗಳನ್ನು ಪರಿಶೀಲನೆಗೆ ಪಡೆದು ಶಿಫಾರಸು ಮಾಡುವುದು.<br>ಅಸಲು ಮತ್ತು ಬಡ್ಡಿ ಸೇರಿ ರೂ:50000-00ಗಳಿಗಿಂತ ಜಾಸ್ತಿ ಇರುವ ಪ್ರಕರಣಗಳಲ್ಲಿ ಸಾಲ ಮರುಪಾವತಿಸಲು ನಿಗದಿ ಪಡಿಸಿದ ತಿಂಗಳಿಗೆ ಕಾಯದೇ ಅರ್ಹ ನೇಕಾರರು ಸಾಲ ಮರು ಪಾವತಿಸಿದ ಕೂಡಲೇ ಕ್ಲೈಮ್ ಬಿಲ್ಲುಗಳನ್ನು ಪರಿಶೀಲನೆಗೆ ಪಡೆದು ಶಿಫಾರಸು ಮಾಡುವುದು.<br>ಈ ನಿರ್ದೇಶನಗಳನ್ನು ಸರ್ಕಾರಿ ಆದೇಶ ದಿನಾಂಕ ವಾಕೈ 57 ಜಕೈಯೋ 2017 ದಿನಾಂಕ 13-12-2017 ರ ಕಂಡಿಕೆ 12 ರ ಪ್ರಕಾರ ಈ ಆಡಳಿತಾತ್ಮಕ ಮಾರ್ಗಸೂಚಿ ಹೊರಡಿಸಲಾಗಿದೆ. ಮತ್ತು ಈ ರೀತಿ ಕ್ರಮವಹಿಸಲು ಸೂಚಿಸಿದೆ. |
| 5 | ಸಾಲ ಮನ್ನಾ ಯೋಜನೆಯ ಅಡಿ ಬಡ್ಡಿ ಆಕರಣೆ ಬಗ್ಗೆ. | ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರಿ ಸಂಸ್ಥೆಗಳಿಂದ/ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿ ಗರಿಷ್ಠ ಬಡ್ಡಿ ದರ ಶೇ.11 ರ ಮಿತಿಗೊಳಪಟ್ಟು ನೈಜ ಬಡ್ಡಿಯನ್ನು (ನೈಜ ಬಡ್ಡಿ ದರ ಅಥವಾ ಶೇ.11 ರ ಬಡ್ಡಿ ಇದರಲ್ಲಿ ಕಡಿಮೆ ಇರುವ ಬಡ್ಡಿ) ಸಾಲಮನ್ನಾ ಯೋಜನೆಯಡಿ ಬಡ್ಡಿ ಲೆಕ್ಕಾಚಾರಕ್ಕೆ ಪರಿಗಣಿಸತಕ್ಕದ್ದು. |

....3

| | | |
|---|---|---|
| 6 | ಸಹಕಾರ ಸಂಘ / ಬ್ಯಾಂಕ್‌ಗಳು ಸಾಲಮನ್ನಾ ಪ್ರಸ್ತಾವನೆಯನ್ನು ದ್ವಿ-ಪ್ರತಿಯಲ್ಲಿ ಇಲಾಖೆಗೆ ಸಲ್ಲಿಸುವ ಸಂಧರ್ಭದಲ್ಲಿ ದೃಢೀಕರಿಸಿ, ಪ್ರಮಾಣೀಕರಿಸಬೇಕಾದ ಪ್ರಮಾಣ ಪತ್ರಗಳು. | 1) ಸರ್ಕಾರಿ ಆದೇಶ ವಾಕ್ಯ 57 ಜಕೈಯೋ 2017 ಬೆಂಗಳೂರು ದಿನಾಂಕ 13-12-2017 ಮತ್ತು 20-02-2018 ಅನ್ವಯ ಸಾಲಮನ್ನಾ ಯೋಜನೆಯನ್ನು ನೇಕಾರರು ನೇಕಾರಿಕೆ ಚಟುವಟಿಕೆ ಉದ್ದೇಶಕ್ಕಾಗಿ ಪಡೆದಂತಹ ಅಲ್ಪಾವಧಿ ಮತ್ತು ಧೀರ್ಘಾವಧಿ ಕ್ಲೈಮ್‌ಗಳಿಗೆ ಮಾತ್ರ ಅನ್ವಯಿಸಿ ಪರಿಗಣಿಸಲಾಗಿದೆ.<br>2) ಕ್ಲೈಮ್ ಮಾಡಿರುವ ಮೊಬಲಗು ನೇಕಾರಿಗೆ ಮಂಜೂರಾದ ಸಾಲಗಳಿಗೆ ಮಾತ್ರ ಸಂಬಂಧಿಸಿದೆ.<br>3) ಈ ಕ್ಲೈಮ್ ಬಿಲ್ಲನಲ್ಲಿ ಕ್ಲೈಮ್ ಮಾಡಿದ ಮೊತ್ತದಲ್ಲಿ ನೇಕಾರರು ಬಡ್ಡಿ ಸಹಾಯಧನ ಯೋಜನೆಯಡಿ ಪಡೆದಿರುವ / ಪಡೆದಿರಬಹುದಾದ ಸಹಾಯಧನವನ್ನು ಕಡಿತ ಮಾಡಲಾಗಿದೆ ಹಾಗೂ ನಂತರ ಕ್ಲೈಮ್ ಮಾಡಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.<br>4) ಯಾವುದೇ ಸಂದರ್ಭದಲ್ಲಿ ಸಹಕಾರ ಸಂಘ / ಬ್ಯಾಂಕ್‌ಗಳು ನಿಯಮಬಾಹಿರವಾಗಿ ಸಾಲ ಮನ್ನಾ ಯೋಜನೆಯಡಿ ಕ್ಲೈಮ್ ಮಾಡಿದ್ದು ಕಂಡುಬಂದಲ್ಲಿ ಅಂತಹ ಸಹಾಯಧನವನ್ನು ಕೂಡಲೇ ಸರ್ಕಾರಕ್ಕೆ ಬಡ್ಡಿಯೊಂದಿಗೆ ಮರುಪಾವತಿಸಲು ಬದ್ಧರಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.<br>5) ಸದರಿ ಯೋಜನೆಯಡಿ ನೇಕಾರರು ಪಡೆದ ಸಾಲಕ್ಕೆ ಗರಿಷ್ಠ ಶೇ.11 ರ ಬಡ್ಡಿ ಮಿತಿಗೆ ಒಳಪಟ್ಟು ನೈಜ ಬಡ್ಡಿಯನ್ನು ಮಾತ್ರ ಸಾಲಮನ್ನಾ ಯೋಜನೆಯಡಿ ಬಡ್ಡಿ ಲೆಕ್ಕಚಾರಕ್ಕೆ ಪರಿಗಣಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.<br>6) ಮೇಲಿನ ಕ್ಲೈಮ್ ಬಿಲ್ಲಿಗೆ ಸಂಬಂಧಿಸಿದ ಸಹಕಾರ ಸಂಘ / ಬ್ಯಾಂಕ್ ಹಾಜರುಪಡಿಸಿದ ದಾಖಲೆ ಹಾಗೂ ಲೆಕ್ಕಪತ್ರಗಳ ವಿವರಗಳನ್ನು ಪರಿಶೀಲಿಸಿ ಮಾರ್ಗಸೂಚಿಯ ಪ್ರಕಾರ ಮೇಲಿನ ಕ್ಲೈಮ್ ಬಿಲ್ಲು ಸಾಲಮನ್ನಾ ಯೋಜನೆಯಡಿ ಮಂಜೂರಾತಿಗೆ ಅರ್ಹವಾಗಿರುತ್ತದೆ ಎಂದು ಪ್ರಮಾಣೀಕರಿಸಲಾಗಿದೆ.<br>7) ಮೇಲ್ಕಂಡ ---------------------------------------- ಸಹಕಾರಿ ಸಂಘ/ಸೌಹಾರ್ದಸಂಘ/ಸಹಕಾರಿ ಬ್ಯಾಂಕಿನ ಒಟ್ಟು -------- ಪ್ರಕರಣಗಳನ್ನು ಯೋಜನೆಯ ಸರ್ಕಾರಿ ಆದೇಶ ವಾಕ್ಯ 57 ಜಕೈಯೋ 2017 ಬೆಂಗಳೂರು ದಿನಾಂಕ 13-12-2017, 29-01-2018, 20-02-2018, 04-01-2018 ಹಾಗೂ 26-02-2018 ರ ಷರತ್ತು ನಿಬಂಧನೆಗಳ ಅನ್ವಯ ಪರಿಶೀಲಿಸಿ ರೂ -----------ಗಳ ಅಸಲು ಮತ್ತು ರೂ:-------------ಗಳ ಬಡ್ಡಿ ಹೀಗೆ ಒಟ್ಟು ರೂ:--------- ------------ಗಳನ್ನು (ಅಕ್ಷರದಲ್ಲಿ--------------------- ---------------------------------------------- -----------------) ಮನ್ನಾ ಮಾಡಲು ಶಿಪಾರಸು ಮಾಡಿದೆ.<br>8) ಈ ಮೊಬಲಗನ್ನು ಬೇರೆ ಯಾವುದೇ ಬಿಲ್ಲುಗಳ ಮೂಲಕ ಕ್ಲೇಮ್ ಮಾಡಿರುವುದಿಲ್ಲವೆಂದು ದೃಡೀಕರಿಸಿದೆ. |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

**ಇವರಿಗೆ:-**

1) ಅಧಿಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.
2) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಪೂರ್ವ/ಪಶ್ಚಿಮ/ಉತ್ತರ/ ದಕ್ಷಿಣ ವಲಯ.
3) ಸಹಕಾರ ಸಂಘಗಳ ಜಂಟಿ ನಿಬಂಧಕರು (ಜವಳಿ), ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.

5) ಉಪ / ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿ.ಪಂ., ..........................................ಜಿಲ್ಲೆ.
6) ಉಪ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ, ..................................ಜಿಲ್ಲೆ ಇವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ವಯ ಮುಂದಿನ ಕ್ರಮಕ್ಕಾಗಿ.
7) ಉಪ ನಿರ್ದೇಶಕರು, ಕೈಮಗ್ಗ/ಜವಳಿ/ಬಂಡವಾಳ/ ತರಬೇತಿ, ಕೈಜಇ, ಕೇಂದ್ರ ಕಛೇರಿ, ಬೆಂಗಳೂರು.
8) ಲೆಕ್ಕಾಧಿಕಾರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.
9) ಸಂಬಂಧಿಸಿದ ನೇಕಾರರ ಸಹಕಾರಿ ಸಂಘಗಳು / ಸಂಸ್ಥೆಗಳಿಗೆ ಆಯಾ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ.
10) ಮೆ: ಯು.ಸಿ.ಬಿಎಸ್., ಕನ್ಸಲ್ಟಂಟ್ಸ್, ಗಿರಿನಗರ, ಬೆಂಗಳೂರು ಇವರಿಗೆ ನೀಡುತ್ತಾ ಸಂಸ್ಥೆ ಹಾಗೂ ಜಿಲ್ಲಾ / ವಲಯ ಮಟ್ಟದ ಅಧಿಕಾರಿಗಳಿಗೆ ಸಹಕಾರ ನೀಡಲು ಹಾಗೂ ಈ ಸುತ್ತೋಲೆಯನ್ನು ಇಲಾಖೆಯ ಸಾಲ ಮನ್ನಾ ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಿದೆ.
11) ಕಛೇರಿ ಪ್ರತಿ.

<u>ಪ್ರತಿಯನ್ನು :-</u>

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಘನ ಅವಗಾಹನೆಗೆ ಸಲ್ಲಿಸಲಾಗಿದೆ.
2) ಸಹಕಾರ ಸಂಘಗಳ ನಿಬಂಧಕರು, ಆಲಿ ಆಸ್ಕರ್ ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ.
3) ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಶಂಕರ ಮಠ ರಸ್ತೆ, ಬಸವನಗುಡಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ತಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ / ಮಾಹಿತಿ ನೀಡಲು ಕೋರಿ ನೀಡಿದೆ.
4) ಕಛೇರಿ ಪ್ರತಿ.

## ಅನುಬಂಧ-1

### ಸಾಲ ಮನ್ನಾ ವೆಬ್ ಪೋರ್ಟಲ್‌ನಲ್ಲಿ ಕ್ಲೈಮ್ ಬಿಲ್ಲುಗಳನ್ನು ಸಲ್ಲಿಸುವ ಮಾರ್ಗಸೂಚಿ

ಸರ್ಕಾರದ ಆದೇಶ ಸಂಖ್ಯೆ ವಾಕೈ 57 ಜಕೈಯೋ 2017 ದಿನಾಂಕ 13-12-2017 ಮತ್ತು 20-02-2018 ರ ಪ್ರಕಾರ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ವಿವಿಧೋದ್ದೇಶ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳಿಂದ ಪಡೆದಿರುವ ಸಾಲದ ಹೊರಬಾಕಿಯಲ್ಲಿ ರೂ.50,000/- ಗಳ ವರೆಗಿನ ಸಾಲವನ್ನು ಮನ್ನಾ ಮಾಡಲು ಈಗಾಗಲೇ ಸರ್ಕಾರ ಆದೇಶಿಸಿದೆ.

ಈ ಕುರಿತು ಸಾಲಮನ್ನಾ ಮಾಹಿತಿಯನ್ನು ಗಣಕೀಕರಿಸಲು ವೆಬ್‌ಪೋರ್ಟಲ್ ಅಭಿವೃದ್ಧಿಪಡಿಸಿ ಈಗಾಗಲೇ ನೇಕಾರರವಾರು ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಅಪ್‌ಲೋಡ್ ಮಾಡಿರುವ ವಿವರಗಳನ್ನು ವ್ಯಾಲಿಡೇಟ್ ಮಾಡಲು ಹಾಗೂ ಬಿಲ್‌ಗಳನ್ನು ವೆಬ್‌ಪೋರ್ಟಲ್‌ನಲ್ಲಿ ಸಲ್ಲಿಸಲು ಅನುಸರಿಸಬೇಕಾದ ಮಾರ್ಗಸೂಚಿ ಈ ಕೆಳಕಂಡಂತಿರುತ್ತದೆ.

1. **ಡೇಟಾ ವ್ಯಾಲಿಡೇಷನ್:**

ವೆಬ್‌ಪೋರ್ಟಲ್‌ಗೆ ಲಾಗಿನ್ ಆಗಿ ಸಾಲಮನ್ನಾ ಮೇನ್ ಮೆನು ಅಡಿಯಲ್ಲಿ ಕ್ಲೈಮ್ ಫಾರಂ ಅಪ್‌ಲೋಡ್ ಕ್ಲಿಕ್ಕಿಸಿ. ಅಪ್‌ಲೋಡ್ ಆಗಿರುವಂತಹ ಎಲ್ಲಾ ಮಾಹಿತಿಯು ಗ್ರಿಡ್‌ನಲ್ಲಿ ಕಾಣಿಸುತ್ತದೆ. ಎಡಿಟ್ ಲೋನ್ ವೇವರ್ ಡೇಟಾ ಕ್ಲಿಕ್ಕಿಸಿ. ನಂತರ ಪ್ರತಿ ನೇಕಾರರ ಹೆಸರಿನ ಮುಂಚೆ ಇರುವ ಎಡಿಟ್ ಬಟನ್ ಕ್ಲಿಕ್ಕಿಸಿ. ಈಗಾಗಲೇ ದಿನಾಂಕ 11.01.2018ರಂದು ಹೊರಡಿಸಿರುವ ಸುತ್ತೋಲೆಯಂತೆ ಅಪ್‌ಲೋಡ್ ಮಾಡಿರುವ ಮಾಹಿತಿಯು ಸರಿ ಇದೆ ಎಂಬುದಾಗಿ ದೃಢೀಕರಿಸತಕ್ಕದ್ದು. ಈ ಹಂತದಲ್ಲಿ ಅಪ್‌ಲೋಡ್ ಮಾಡಿರುವ ಮಾಹಿತಿಯಲ್ಲಿ ಏನಾದರೂ ತಪ್ಪು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಲು ಅವಕಾಶವಿರುತ್ತದೆ. ಆದ್ದರಿಂದ ಸಂಘಗಳು ಎಲ್ಲಾ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸಂಘದ ದಾಖಲಾತಿಗಳಗನುಗುಣವಾಗಿ ಮಾಹಿತಿಯು ಸರಿಯಾಗಿದೆಯೆಂದು ದೃಢೀಕರಿಸತಕ್ಕದ್ದು.

ಡೇಟಾ ವ್ಯಾಲಿಡೇಷನ್ ಮಾಡಲು ಅನುವಾಗುವಂತೆ ಅಪ್‌ಲೋಡ್ ಮಾಡಿರುವ ಮಾಹಿತಿಯನ್ನು ಎಕ್ಸೆಲ್‌ನಲ್ಲಿ ಡೌನ್‌ಲೋಡ್ ಮಾಡಲು ಅವಕಾಶ ನೀಡಲಾಗಿದೆ. ಡೇಟಾ ವ್ಯಾಲಿಡೇಷನ್ ಮಾಡುವ ಮುನ್ನ ಎಕ್ಸೆಲ್ ಫೈಲನ್ನು ಡೌನ್‌ಲೋಡ್ ಮಾಡಿ ಮಾಹಿತಿಯನ್ನು ಪರಿಶೀಲಿಸಬಹುದು. ತಪ್ಪು ಕಂಡುಬಂದಲ್ಲಿ ಮೇಲೆ ತಿಳಿಸಿರುವಂತೆ ಎಡಿಟ್ ಮಾಡತಕ್ಕದ್ದು.

ಅಪ್‌ಲೋಡ್ ಮಾಡಿರುವ ಮಾಹಿತಿಯನ್ನು ಆ ಖಾತೆಗಳು ಬಿಲ್ಲಿನಲ್ಲಿ ಸಬ್‌ಮಿಟ್ ಮಾಡುವವರೆಗೆ ಸಂಘದ ಹಂತದಲ್ಲಿ ಮಾಹಿತಿಯನ್ನು ಪರಿಷ್ಕರಿಸಲು ಅವಕಾಶವಿರುತ್ತದೆ. ಬಿಲ್ ಸಬ್‌ಮಿಟ್ ಮಾಡಿದ ನಂತರ ಆಯಾ ಖಾತೆಗಳ ವಿವರಗಳನ್ನು ಎಡಿಟ್ ಮಾಡುವ ಅವಕಾಶವಿರುವುದಿಲ್ಲ. ಆದ್ದರಿಂದ ಬಿಲ್ ಸಬ್‌ಮಿಟ್ ಮಾಡುವ ಮುನ್ನ ಸಂಘಗಳು ಎಲ್ಲಾ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸತಕ್ಕದ್ದು.

2. **ಕ್ಲೈಮ್ ಬಿಲ್ ಸಲ್ಲಿಸುವ ವಿಧಾನ:**

ವೆಬ್‌ಪೋರ್ಟಲ್‌ನಲ್ಲಿ ಸಾಲಮನ್ನಾ ಮೆನು ಅಡಿಯಲ್ಲಿ ಲೋನ್ ಕ್ಲೈಮ್ ಫಾರಂ ಕ್ಲಿಕ್ಕಿಸಿ. ನಂತರ ಜನವರಿ ತಿಂಗಳನ್ನು ಆಯ್ಕೆ ಮಾಡಿ. ಮೊದಲನೇ ಹಂತದಲ್ಲಿ ಅಸಲು ಮತ್ತು ಬಡ್ಡಿ ಸೇರಿ ಒಟ್ಟು ಬಾಕಿ ರೂ.50,000/- ಗಳ ವರೆಗಿನ ಖಾತೆಗಳು ಕಾಣಿಸುತ್ತದೆ. ಸಂಘದ ದಾಖಲಾತಿಗಳ ಪ್ರಕಾರ ಒಟ್ಟು ಖಾತೆಗಳ ಸಂಖ್ಯೆ ಪರಿಶೀಲಿಸತಕ್ಕದ್ದು. ಈ ಹಂತದಲ್ಲಿ ಒಟ್ಟು ಬಾಕಿ ರೂ.50,000/- ಗಳ ವರೆಗಿನ ಮೊತ್ತ, 5 ವರ್ಷಗಳವರೆಗಿನ (1825 ದಿನಗಳು) ಸಾಲದ ಅವಧಿಯ ಹಾಗೂ ಕ್ರಮ ಸಂಖ್ಯೆ 1 ರಲ್ಲಿ ತಿಳಿಸಿರುವಂತೆ ವ್ಯಾಲಿಡೇಟ್ ಮಾಡಿರುವ ಖಾತೆಗಳು ಮಾತ್ರ ಕಾಣಿಸುತ್ತದೆ. ಎಲ್ಲಾ ಮಾಹಿತಿಯು ಸರಿ ಇದೆ ಎಂಬುದಾಗಿ ದೃಢೀಕರಿಸಿದ ನಂತರ ಸಬ್‌ಮಿಟ್ ಫಾರ್ ಕ್ಲೈಮ್ ಬಟನ್‌ನ್ನು ಕ್ಲಿಕ್ಕಿಸಿ.

ಮುಂದುವರೆದು, ಯಾವುದಾದರೂ ಖಾತೆಗಳು ಕ್ಲೈಮ್ ಬಿಲ್ಲಿನಲ್ಲಿ ಸಬ್‌ಮಿಟ್ ಆಗದೇ ಉಳಿದುಹೋದಲ್ಲಿ ಅಂತಹ ಖಾತೆಗಳು ಮುಂದಿನ ಮಾಹೆಯಲ್ಲಿ ಕ್ಯಾರಿಫಾರ್ವರ್ಡ್ ಆಗುವಂತೆ ಅವಕಾಶ ಕಲ್ಪಿಸಲಾಗಿದೆ.

3. **ರೂ.50,000/- ಕ್ಕಿಂತ ಹೆಚ್ಚು ಬಾಕಿ ಇರತಕ್ಕಂತಹ ಖಾತೆಗಳ ಟ್ರಾನ್ಸಾಕ್ಷನ್ ಮಾಡುವ ವಿಧಾನ:**

ವೆಬ್‌ಪೋರ್ಟಲ್‌ನಲ್ಲಿ ಸಾಲಮನ್ನಾ ಮೆನು ಅಡಿಯಲ್ಲಿ ಲೋನ್ ಟ್ರಾನ್ಸಾಕ್ಷನ್ ಫಾರಂ ಕ್ಲಿಕ್ಕಿಸಿ. ನಂತರ ಫೆಬ್ರವರಿ ತಿಂಗಳನ್ನು ಆಯ್ಕೆ ಮಾಡಿ. ಈ ಹಂತದಲ್ಲಿ ಒಟ್ಟು ಬಾಕಿ ರೂ.50,000/- ಗಳಿಗಿಂತ ಹೆಚ್ಚಿರುವ ಖಾತೆಗಳು ಕಾಣಿಸುತ್ತವೆ. ಅನುಬಂಧದಲ್ಲಿ ನೀಡಿರುವ ಉದಾಹರಣೆಗಳಂತೆ ಮರುಪಾವತಿಯಾದ ವಿವರಗಳನ್ನು ನಮೂದಿಸಿ ಸೇವ್ ಬಟನ್ ಕ್ಲಿಕ್ಕಿಸಿ.

ಈ ರೀತಿ ಅನ್ವಯವಾಗುವ ಅವಧಿಯಲ್ಲಿ ಮರುಪಾವತಿಯಾಗಿರುವ ವಿವರಗಳನ್ನು ಸಂಬಂಧಪಟ್ಟ ನೇಕಾರರ ಹೆಸರಿಗೆ ವಿವರಗಳನ್ನು ಸರಿಯಾಗಿ ನಮೂದಿಸತಕ್ಕದ್ದು.

.... 2

ವಿ.ಸೂ.: ವೆಬ್‌ಪೋರ್ಟಲ್ ಆನ್‌ಲೈನ್‌ನಲ್ಲಿ ಹೋಸ್ಟ್ ಆಗಿರುವ ಕಾರಣ ಟ್ರಾನ್ಸಾಕ್ಷನ್ ಮಾಡುವಾಗ ಹೆಚ್ಚು ಸಮಯ ಕಳೆದಲ್ಲಿ ಸಿಸ್ಟಂ ಟೈಮ್ ಔಟ್ ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪ್ರತಿ ನೇಕಾರರ ಹೆಸರಿಗೆ ಮರುಪಾವತಿಯಾಗಿರುವ ಮೊತ್ತವನ್ನು ನಮೂದಿಸಿದ ನಂತರ ಸೇವ್ ಬಟನ್‌ನ್ನು ಕ್ಲಿಕ್ಕಿಸಿ. ಇದರಿಂದ ಟ್ರಾನ್ಸಾಕ್ಷನ್ ಮಾಡಿರುವ ಡೇಟಾ ಸೇವ್ ಆಗಿರುತ್ತದೆ.

ಟ್ರಾನ್ಸಾಕ್ಷನ್ ಸೇವ್ ಮಾಡಿರುವ ಎಲ್ಲಾ ಖಾತೆಗಳು ಆ ಮಾಹೆಯ ಕ್ಲೈಮ್ ಬಿಲ್ಲಿನಲ್ಲಿ ಕಾಣಿಸುತ್ತದೆ. ಅಂದರೆ ಟ್ರಾನ್ಸಾಕ್ಷನ್ ಮಾಡುವಾಗ ಫೆಬ್ರವರಿ ಮಾಹೆಯನ್ನು ಆಯ್ಕೆ ಮಾಡಿದ್ದಲ್ಲಿ ಈ ಖಾತೆಗಳು ಲೋನ್ ಕ್ಲೈಮ್ ಫಾರಂ ಮೆನು ಅಡಿಯಲ್ಲಿ ಫೆಬ್ರವರಿ ಮಾಹೆಯಲ್ಲಿ ಕಾಣಿಸುತ್ತದೆ. ಕ್ರಮಸಂಖ್ಯೆ 2 ರ ಪ್ರಕಾರ ಲೋನ್ ಕ್ಲೈಮ್ ಫಾರಂನಲ್ಲಿ ಟ್ರಾನ್ಸಾಕ್ಷನ್ ಮಾಡಿರುವ ಎಲ್ಲಾ ವಿವರಗಳು ಸರಿಯಿದೆ ಎಂಬುದಾಗಿ ಪರಿಶೀಲಿಸಿದ ನಂತರ ಸಬ್‌ಮಿಟ್ ಫಾರ್ ಕ್ಲೈಮ್ ಬಟನ್ ಕ್ಲಿಕ್ಕಿಸಿ. ಇದೇ ಪ್ರಕ್ರಿಯೆ ಸಾಲಮನ್ನಾ ಅವಧಿಯ ಎಲ್ಲಾ ಮಾಹೆಗಳಿಗೂ ಅನ್ವಯಿಸುತ್ತದೆ.

**— ಅನುಬಂಧ —**

ಟ್ರಾನ್ಸಾಕ್ಷನ್ ಉದಾಹರಣೆ:-

**Example 1:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 55,000 | 6,600 | 61,600 |

**Excess- Rs.11,600**

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 5,000 | 6,600 | 50,000 | 0 |

**Example 2:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 50,000 | 6,000 | 56,000 |

**Excess- Rs.6,000**

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 0 | 6,000 | 50,000 | 0 |

**Example 3:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 48,000 | 5,760 | 53,760 |

**Excess- Rs.3,760**

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 0 | 3,760 | 48000 | 2000 |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ